ಮಾನ್ಯ ಸದಸ್ಯರು: ಅಲ್ಲಿ ಸ್ಟ್ರೈಕ್ ಮಾಡಿದರೆ, ಇಲ್ಲಿ ಸಭಾತ್ಯಾಗ ಮಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಇಲ್ಲಿ ತಮಿಳು ಪೇಪರ್‌ನವರು ಯಾರೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಕಪ್ಪು ಬಟ್ಟೆ ಪಕ್ಕದಲ್ಲಿದ್ದರೆ ಮಾಧುಸ್ವಾಮಿಯವರಿಗೆ ಮಾತನಾಡಲು ಸ್ಫೂರ್ತಿ ಸಿಕ್ಕುವುದಿಲ್ಲ ಎಂದು . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾಧುಸ್ವಾಮಿಯವರು ಅವರಿಗೆ ಸಪೋರ್ಟ್ ಮಾಡಿ, ಅವರು ಪಾಪ ಸುಮ್ಮನೆ, ...

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರೇನಾದರೂ ತಮಿಳುನಾಡು ಅಸೆಂಬ್ಲಿಯಲ್ಲಿ ಕುಳಿತಿದ್ದಾರೆಯೇ? ನೀವೇನಾದರೂ ಅವರಿಗೆ ಜಯಲಲಿತಾ ಕಂಡಹಾಗೆ ಕಾಣುತ್ತಿರುವಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಅವರು ಡಿ.ಎಂ.ಕೆ. ಪಾರ್ಟಿ ಸೇರಿದ್ದಾರೆ. ಅವರು ಸುಖವಾಗಿ ಕುಳಿತಿದ್ದರು, ಕಣ್ಣು ಒರೆಸಿಕೊಂಡು . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಖರ್ಗೆಯವರನ್ನು ನೀವು ಜಯಲಲಿತಾರವರಿಗೆ ಹೋಲಿಸುವುದು ತಪ್ಪು. ಇಲ್ಲಿ ಯಾರೂ ಜಯಲಲಿತಾ ಇಲ್ಲ.

('ಯಾವುದೇ ಕಾರಣಕ್ಕೂ ತಮಿಳ್ನಾಡಿಗೆ ನೀರು ಬಿಡಕೂಡದು' ಎಂದು ಘೋಷಣೆಯನ್ನು ಕೂಗುತ್ತಾ, ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ರಾಜೇಂದ್ರನ್: ಇದು ತಮಿಳುನಾಡು ವಿರುದ್ಧ ಎಂದರೆ, ಮತ್ತೆ ತಮಿಳುನಾಡಿನವರನ್ನು ಪಬ್ಲಿಸಿಟಿ ಮಾಡಿದ ತರಹ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಣ್ಣಿನಲ್ಲಿ ಧೂಳು ಬಿದ್ದಿದೆ ಎಂದು ಕಣ್ಣು ಒರೆಸಿಕೊಳ್ಳಲು ತಂದಂಥ ಬಟ್ಟೆ ಅದು. ಆದರೆ, ನೀವು ಅವರೇಕೋ ಕಪ್ಪು ಬಟ್ಟೆ ತಂದಿದ್ದಾರೆ ಎಂದು ಹೇಳಿದಿರಿ. ಪಾಪ ಅವರು ನಿನ್ನೆ ಅಲ್ಲಿ ಇಲ್ಲಿ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮ್ಮನ್ನು ಮಾತನಾಡಲು ಬಿಡುವುದಿಲ್ಲ, ಧರಣಿ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಅದಕ್ಕಾಗಿ ಅವರನ್ನು ಕಳುಹಿಸಿಬಿಟ್ಟೆವು.

(ಸದನದಲ್ಲಿ ನಗು)

ಶ್ರೀ ಬಸವರಾಜ ರಾಯರೆಡ್ಡಿ: ವಾಟಾಳ್‌ರವರಿಗೆ ಸ್ವಲ್ಪ ವಿರಾಮದ ಅವಶ್ಯಕತೆ ಇತ್ತು. ಹಾಗಾಗಿ, ಹೊರ ಹೋದರು.

3. ಎತ್ತೀಯ ಕಾರ್ಯಕಲಾಪ:(ಮುಂದುವರೆದದ್ದು)

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇವತ್ತು ತಾವು 25 ಬೇಡಿಕೆಗಳನ್ನು ಸಾರಾಸಗಟಾಗಿ ಮಂಡಿಸಿದ್ದೀರಿ. ಇದು ಬಹುಶಃ ಸಾಮಾನ್ಯ ವಿಷಯಗಳ ಮೇಲೆ ಆದಂಥ ಚರ್ಚೆಯಾಗುತ್ತದೆ ಎಂದು ನಾನು ಭಾವಿಸಿಕೊಂಡು, 2-3 ಇಲಾಖೆಗಳ ಮೇಲೆ ಬೆಳಕು ಚೆಲ್ಲಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಈ ರಾಜ್ಯದಲ್ಲಿ ಇವತ್ತು ಯಥೇಚ್ಛವಾಗಿ ಸಂಪತ್ಭರಿತವಾಗಿರುವಂಥ ಇಲಾಖೆಯೆಂದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ. ಈ ಇಲಾಖೆಯಲ್ಲಿ ಇಡೀ ರಾಜ್ಯದ ಸಂಪತ್ತು ಕೊಳ್ಳೆ ಹೋಗುತ್ತಿದೆ. ಈ ಶಾಸನ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಬೇಕು, ಇದಕ್ಕೆ ಏನಾದರೊಂದು ಕಡಿವಾಣ ಹಾಕಬೇಕು, ಇದನ್ನು ಏನಾದರೊಂದು ನೆಲೆಗೆ, ಒಂದು ದಿಕ್ಕಿಗೆ ತೆಗೆದುಕೊಂಡು ಹೋಗಬೇಕು